ಹಿಂಬರಹ

ಸಂಖ್ಯೆ: ಡಿಟಿಇ 1 ಇಎಸ್‌ಟಿ(9) 2014 | 1113

ದಿನಾಂಕ: 26–07–2014

ದಿನಾಂಕ: 26.07.2014 ರ ಕರ್ನಾಟಕ ಸರ್ಕಾರಿ ನಡವಳಿ/ಆದೇಶ ಸಂಖ್ಯೆ:ಇಡಿ 75 ಯುಆರ್‌ಸಿ 2014 ಪ್ರತಿಯನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1. ಈ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ/ಅನುದಾನಿತ /ಅನುದಾನ ರಹಿತ ಚಿತ್ರಕಲಾ ಮಹಾವಿದ್ಯಾಲಯಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ [ಇಲಾಖಾ ವೆಬ್‌ಸೈಟ್ ಮುಖಾಂತರ]
2. ಈ ನಿರ್ದೇಶನಾಲಯದ, ಜಂಟಿ ನಿರ್ದೇಶಕರು(ಆಡಳಿತ), ಜಂಟಿ ನಿರ್ದೇಶಕರು (ತನಿಖಾ) ಆಡಳಿತಾಧಿಕಾರಿ ಸಹಾಯಕ ಆಡಳಿತಾಧಿಕಾರಿ (1), (2) ಹಾಗೂ (3), ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ರಿಜಿಸ್ಟ್ರಾರ್ (ಆಡಳಿತ) ಮಾಹಿತಿಗಾಗಿ
3. ಈ ನಿರ್ದೇಶನಾಲಯದ ಇಎಸ್‌ಟಿ (8) ಬಿ ನಗದು & ಚಿತ್ರಕಲಾ ಘಟಕ ವಿಭಾಗಗಳಿಗೆ ಮಾಹಿತಿಗಾಗಿ.
4. ಈ ನಿರ್ದೇಶನಾಲಯದ ಇ–ಆಡಳಿತ ವಿಭಾಗಕ್ಕೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ
5. ಶ್ರೀ. ಬಿ. ಕೆ. ಬಡಿಗೇರ, ಚಿತ್ರಕಲಾ ಘಟಕ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

ಆಡಳಿತಾಧಿಕಾರಿ

KK 26/7/14

Sh-est(9) Endsmnt

ಸಂ. 2873
ತಾ. 26/7/14

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಶ್ರೀ ವಿ.ಆರ್. ಬಡಿಗೇರ, ಉಪನ್ಯಾಸಕರು, ಧಾರವಾಡ ಚಿತ್ರಕಲಾ ಮಹಾವಿದ್ಯಾಲಯ, ಇವರನ್ನು ಸಹಾಯಕ ನಿರ್ದೇಶಕರು (ಚಿತ್ರಕಲಾ ಘಟಕ), ಹುದ್ದೆಗೆ ಮರು ಪದನಾಮೀಕರಿಸಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿಯೇ ವಿಲೀನಗೊಳಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ 312 ಯುಎನ್ಇ 2011, ದಿನಾಂಕ 7.1.2014.
2) ಸರ್ಕಾರದ ಆದೇಶ ಸಂಖ್ಯೆ: ಇಡಿ 167 ಯುಎನ್ಇ 2012, ದಿನಾಂಕ 15.5.2012.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ, ರಾಜ್ಯದಲ್ಲಿನ ಚಿತ್ರಕಲಾ ಮಹಾವಿದ್ಯಾಲಯಗಳ/ಶಾಲೆಗಳ ಆಯವ್ಯಯ ಮತ್ತು ಆಡಳಿತ ನಿರ್ವಹಣೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಕೋರಿಕೆಯಂತೆ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನ ರಹಿತ ಚಿತ್ರಕಲಾ ಮಹಾವಿದ್ಯಾಲಯಗಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ವಿಷಯಗಳನ್ನು ನೋಡಿಕೊಳ್ಳಲು ಧಾರವಾಡ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ವಿ.ಆರ್. ಬಡಿಗೇರ, ಇವರನ್ನು ಹುದ್ದೆ ಸಮೇತ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯಕ್ಕೆ ವರ್ಗಾಯಿಸಿ ಆದೇಶಿಸಲಾಗಿದೆ.

ರಾಜ್ಯದ 76 ಚಿತ್ರಕಲಾ ಮಹಾವಿದ್ಯಾಲಯಗಳ/ಶಾಲೆಗಳ ಆಯವ್ಯಯ ಮತ್ತು ಆಡಳಿತ ನಿರ್ವಹಣೆಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯು ನಿಭಾಯಿಸುತ್ತಿದ್ದು, ಚಿತ್ರಕಲಾ ಮಹಾವಿದ್ಯಾಲಯಗಳ/ಶಾಲೆಗಳ ಆಡಳಿತ ನಿರ್ವಹಣೆ, ವೃಂದ ಮತ್ತು ನೇಮಕಾತಿ ನಿಯಮಗಳು, ಸಿಬ್ಬಂದಿ ಮಾದರಿ ಮತ್ತು ಮಾನದಂಡಗಳು ಇಲ್ಲದಿರುವುದರಿಂದ, ಅವುಗಳನ್ನು ತ್ವರಿತವಾಗಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ರಚಿಸಿರುವ ಸಮಿತಿಯ ಪ್ರಸ್ತಾವನೆಯೊಂದಿಗೆ ರೂಪಿಸಬೇಕಾಗಿರುವುದರಿಂದ, ಸಹಾಯಕ ನಿರ್ದೇಶಕರು (ಚಿತ್ರಕಲಾ) ಹುದ್ದೆಯು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಅತ್ಯಾವಶ್ಯಕವೆಂದು ಮನಗಂಡು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 75 ಯುಆರ್‌ಸಿ 2014**
**ಬೆಂಗಳೂರು, ದಿನಾಂಕ 26ನೇ ಜುಲೈ 2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ವಿ.ಆರ್. ಬಡಿಗೇರ, ಇವರು ಪ್ರಸ್ತುತ ಗ್ರೂಪ್ –ಸಿ ವೃಂದದಲ್ಲಿರುವುದರಿಂದ, ಈ ಹುದ್ದೆಯನ್ನು ಕೂಡಲೇ ಜಾರಿಗೆ ಬರುವಂತೆ ಸಹಾಯಕ ನಿರ್ದೇಶಕರು (ಚಿತ್ರಕಲಾ ಘಟಕ) ಎಂದು ಉನ್ನತೀಕರಿಸಿ ಗ್ರೂಪ್ –ಬಿ ಹುದ್ದೆಯೆಂದು ಪದನಾಮೀಕರಿಸಿ ಅವರ ಸ್ವಂತ ವೇತನದಲ್ಲಿಯೇ ಆಡಳಿತದ ಹಿತದೃಷ್ಟಿಯಿಂದ ಉನ್ನತೀಕರಿಸಿದ ಹುದ್ದೆಯಲ್ಲಿಯೇ ಮುಂದುವರಿಸಿ ಆದೇಶಿಸಲಾಗಿದೆ.

...2

2) ಈ ಆದೇಶವನ್ನು ಆರ್ಥಿಕ ಇಲಾಖೆಯ **ಟಿಪ್ಪಣಿ ಸಂಖ್ಯೆ: ಆಇ 804 ವೆಚ್ಚ-8/2014, ದಿನಾಂಕ 16.7.2014** ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
26/7/14
**(ಎಂ.ಜಿ ವೆಂಕಟೇಶಯ್ಯ)**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಪ್ರಕಟಣೆಗಾಗಿ.

**ಗೆ:**

1. ಮಹಾಲೇಖಪಾಲರು (ಎ&ಇ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಪ್ರಾಂಶುಪಾಲರು, ಧಾರವಾಢ ಚಿತ್ರಕಲಾ ಮಹಾವಿದ್ಯಾಲಯ, ಧಾರವಾಡ.
7. ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-8), ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ.
11. ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ.
12. ಶ್ರೀ ವಿ.ಆರ್. ಬಡಿಗೇರ, ಚಿತ್ರಕಲಾ ಘಟಕ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

= = =